
ನಾಂದಿಪದ

# ಕೈ ಹಿಡಿದು ನಡೆಸುವ ಗೆಳೆಯ

ಕತೆಯೊಂದರ ಶಕ್ತಿ ಅಪರಿಮಿತವಾದದ್ದು. ಅದು ನಮ್ಮ ಕೈಹಿಡಿದು ಸರಿಯಾದ ದಾರಿಯಲ್ಲಿ ನಡೆಸುವ ಗೆಳೆಯ, ಸಲಹುವ ಆಪ್ತಬಂಧು. ಈಗಿತ್ತಲಾಗಿ ಕತೆಗಳೇ ನಮ್ಮ ಬದುಕಿನಿಂದ ಮಾಯವಾಗುತ್ತಿವೆ. ಕತೆಯನ್ನು ಹೇಳುವುದು ಮತ್ತು ಕೇಳುವುದು ಕಡಿಮೆಯಾಗುತ್ತಲೇ ನಡೆದಿದೆ. ಈ ಹಿಂದೆ ನಮ್ಮನ್ನು ಹತ್ತು ಹಲವು ರೀತಿಯಲ್ಲಿ ಕತೆಗಳು ಆವರಿಸುತ್ತಿದ್ದವು. ಮನೆಯಲ್ಲಿ ಹಿರಿಯರು, ಬೀದಿಗೆ ಬಂದರೆ ಯಕ್ಷಗಾನ, ಹರಿಕತೆ, ದೊಡ್ಡಾಟ, ನಾಟಕ, ಮಹಾಕಾವ್ಯಗಳ ವಾಚನದಂತಹ ಕತೆಯೂ ಮುಖ್ಯವಾದಂತಹ ಪ್ರಕಾರಗಳು ನೋಡಲು, ಕೇಳಲು ಸಿಗುತ್ತಿದ್ದವು. ಸುತ್ತಲೂ ಮುತ್ತಿರುವ ಕತೆಗಳು ನಮ್ಮನ್ನು ತಿದ್ದಲು ಪ್ರತಿಕ್ಷಣವೂ ಕಾಯುತ್ತಿದ್ದಂತೆ ಇರುತ್ತಿದ್ದವು. ಹಾಗೆ ತಿದ್ದಿಸಿಕೊಳ್ಳುವ ಗುಟ್ಟಾದ ಕಾತರ ಎಲ್ಲರಲ್ಲೂ ಇರುತ್ತಿತ್ತು! ಈಗ ಕತೆಗಳು ಕಾಣೆಯಾಗಲು ಮನುಷ್ಯನ ಕುರಿತು ಆಸಕ್ತಿ ಇಲ್ಲದಾಗುತ್ತಿರುವುದು, ಸಂಬಂಧಗಳ ಸೀಮಿತತೆ, ಆಸಕ್ತಿಗಳ ಪಲ್ಲಟ ಕಾರಣವಾಗಿರುವಂತಿದೆ.

ನಮಗೆ ಗೊತ್ತಿರುವ ಕತೆಗಳನ್ನೇ ಸುಮ್ಮನೆ ನೋಡಿಕೊಂಡರೂ ಅವು ನಮ್ಮ ಅರಿವನ್ನು ವಿಸ್ತರಿಸಿದ್ದು, ನಮ್ಮ ನುಡಿಗಟ್ಟಿನಲ್ಲಿ ಸೇರಿಹೋದದ್ದು ಕಾಣುತ್ತದೆ. ಅದರಲ್ಲೂ ರಾಮಾಯಣ, ಮಹಾಭಾರತದ ಕತೆಗಳು ನಮ್ಮ ಬದುಕಿನ ಹಲವಾರು ಸಂಗತಿಗಳಿಗೆ ರೂಪಕವಾಗಿವೆ. ಜನಪದ, ದೃಷ್ಟಾಂತ ಕತೆಗಳು ನಮ್ಮ ಹಲವು ಸಮಸ್ಯೆಗಳಿಗೆ ಉತ್ತರವಾಗಬಲ್ಲ ದ್ರವ್ಯವನ್ನು ಹೊಂದಿವೆ. ಅವು ಕಟ್ಟುಕತೆಗಳಾದರೂ ನಮ್ಮ ಯೋಚನೆಗಳನ್ನು ಹಲವು ರೀತಿಯಲ್ಲಿ ಮುರಿದು ಕಟ್ಟುವ ಕತೆಗಳೂ ಸಹ. ಆದ್ದರಿಂದಲೇ ಹಿಂದೆ ಕುಮಾರವ್ಯಾಸ ಭಾರತ, ಪಂಪ ಭಾರತ, ಜೈಮಿನಿ ಭಾರತದಂತಹ ಮಹಾಕಾವ್ಯಗಳ ವಾಚನ ನಮ್ಮ ಜನಪದರ ಪ್ರಜ್ಞೆಯನ್ನು, ಜೀವನದೃಷ್ಟಿಯನ್ನು ರೂಪಿಸುತ್ತಿದ್ದುದು ಸಹಜವಾಗಿಯೇ ಇತ್ತು. ಒಂದು ಕಾಲದಲ್ಲಿ ಮಹಾಕಾವ್ಯಗಳ ವಾಚನಗಳನ್ನು ಕೇಳುವುದು ಪುಣ್ಯದ ಸಂಗತಿಯಾಗಿತ್ತು. ಪಂಪ, ಕುಮಾರವ್ಯಾಸ, ಲಕ್ಷ್ಮೀಶರ ಕಾವ್ಯಗಳು ಪ್ರತಿವಾಚನಕ್ಕೂ ಅರ್ಥದ ಹಲವು ಪದರುಗಳನ್ನು ತೆರೆಯುತ್ತಿರುತ್ತವೆ. ಅವು ಜನಪದರ ಜೀವಕ್ಕೆ, ಜೀವನಕ್ಕೆ ನೀಡಿದ ನೆರವು ಅಪಾರ. ಹಳಗನ್ನಡ ಕವಿಗಳು ಮಾತ್ರವಲ್ಲ, ಮನುಷ್ಯನ ಕತೆ ಹೇಳುವುದೇ ಧರ್ಮವಾಗಿದ್ದ ಮಾಸ್ತಿ, ಕಾರಂತ, ಕುವೆಂಪು, ಲಂಕೇಶ್, ತೇಜಸ್ವಿ, ಚಿತ್ತಾಲ, ಕಾರ್ನಾಡ ಅವರ ಸಾಹಿತ್ಯ ಕೊಡುವ ನೆಮ್ಮದಿ, ಮಾರ್ಗದರ್ಶನ ಕಡಿಮೆಯದೇನಲ್ಲ. ಕತೆಯೊಂದು ಮನುಷ್ಯನ ಕಲ್ಪನೆಯನ್ನು, ಸಂವೇದನೆಯನ್ನು ಮತ್ತು ಬದುಕಿನ ಕುರಿತ ಅವನ ದರ್ಶನವನ್ನೇ ವಿಸ್ತರಿಸಬಲ್ಲದು.



ಹಳಗನ್ನಡ ಸಾಹಿತ್ಯದ ಕಡೆಗೆ ಓದುಗರ ಗಮನವನ್ನು ಸೆಳೆಯುವ ದಿಸೆಯಲ್ಲಿ 'ನಿಚ್ಚಂ ಪೊಸತು' ಮಾಲಿಕೆ ಈ ಸಂಚಿಕೆಯಿಂದ ಶುರುವಾಗುತ್ತಿದೆ. ಇದು ಹಳಗನ್ನಡ ಸಾಹಿತ್ಯದ ಚೆಂದವನ್ನು ಓದುಗರಿಗೆ ಪರಿಚಯಿಸುವುದರೊಂದಿಗೆ ಈ ಕಾಲಕ್ಕೆ ಕನ್ನಡಿ ಹಿಡಿಯುವ ಪ್ರಯತ್ನವೂ ಆಗಿದೆ. ಈ ಅಂಕಣದ ಮೊದಲ ಬರಹವನ್ನು ಹಿರಿಯ ಲೇಖಕ, ಜಾನಪದ, ಹಳಗನ್ನಡ ಸಾಹಿತ್ಯದಲ್ಲಿ ಆಳವಾದ ಅರಿವು, ಪರಿಣತಿಯನ್ನು ಹೊಂದಿರುವ ಕೃಷ್ಣಮೂರ್ತಿ ಹನೂರು ಬರೆದಿದ್ದಾರೆ.

**ಸಂದೀಪ ನಾಯಕ**